ಎನ್.ಆರ್. ತಮ್ಮಯ್ಯಶೆಟ್ಟಿ

ರಾಮಾಯಣದಲ್ಲಿ ರಾವಣ ಸೀತೆಯನ್ನು ಅಪಹರಿಸಿದ ಉಲ್ಲೇಖ ಇಂದಿನ ಜಗಕ್ಕೆ ತಪ್ಪು ಸಂದೇಶ ನೀಡಿದಂತಾಗಲಿಲ್ಲವೆ?



'ದಶಶಿರನೇ ಉರುಳಿದ; ಏಕಶೀರ್ಷರು ಉಳಿದೀರೇ?' ಎಂಬ ಎಚ್ಚರಿಕೆ ಒಳ್ಳೆಯದೇ.

ಬೂಕನಕೆರೆ ವಿಜೇಂದ್ರ, ಮೈಸೂರು

ಇಲ್ಲೊಬ್ಬ ಹೆಂಗಸರ ಮಾತನ್ನು ನಂಬಬೇಡ ಎನ್ನುತ್ತಾನಲ್ಲಾ...?

ಜಿಪಿಎಸ್ ರಮಣಿ ತಪ್ಪು ದಾರಿ ಸೂಚಿಸಿದ್ದಳೋ ಏನೋ!

ಟಿ. ಜಾಗೃತ, ಗೂಳೂರು

ಎಲ್ಲಾ ಬೆಲೆಗಳು ಏರುತ್ತಿರುವ ಈ ದಿನಗಳಲ್ಲಿ ಬೆಲೆ ಇಳಿಯುತ್ತಿರುವ ವಸ್ತು ಯಾವುದು ಅಂಕಲ್?

ವ್ಯಾಕ್ಸಿನ್ ಹೆಚ್ಚಿದಂತೆಯೇ ಮೂಲೆಗುಂಪಾಗಲಿರುವ ಫೇಸ್‌ಮಾಸ್ಕ್‌ನದು.

ಬಿ.ಆರ್. ಉಷಾ, ಬೆಂಗಳೂರು

ಕಪ್ಪಾದ ಹುಡುಗಿಯನ್ನು ಮದುವೆಯಾಗಲೋ, ಬೆಳ್ಳಗಿರುವ ಹುಡುಗಿಯನ್ನು ಮದುವೆಯಾಗಲೋ?



ಬಣ್ಣ ಬದಲಾಯಿಸದ ಹುಡುಗಿಯನ್ನು ಆಗಿ.

ಜಯಲಕ್ಷ್ಮಿ ಕಂಚಾರ್ತಿ, ಊರಿಲ್ಲ

ಕೊರೊನಾ ಸಮಯದಲ್ಲಿನ ಶುಭಕಾರ್ಯಗಳಲ್ಲಿ ಹಿರಿಯರಿಗೆ ಪ್ರವೇಶವಿಲ್ಲ. ಅವರ ಆಶೀರ್ವಾದ ಮುಖ್ಯವಲ್ಲವೆ?

'ಎಲ್ಡರ್ಸ್ ಬ್ಲೆಸಿಂಗ್ಸ್ ಡಾಟ್‌ಕಾಮ್'ಗೆ ಹೋಗಿ ಆನ್‌ಲೈನ್ ಆಶೀರ್ವಾದ ಪಡೆಯಿರಿ.

ನಾಗೇಶ ಮೈಸೂರು, ಸಿಂಗಪುರ

ಪರಮಾತ್ಮನ ದರ'ಬಾರಿ'ನಲ್ಲಿ ತೀರ್ಥ ಸೇವನೆಯಾದರೂ ಮಂಗಳಾರತಿ ಮಾತ್ರ ಮನೆಯಲ್ಲೇಕೆ?

ಮಂಗಳ ಹಾಡುವ ರತಿ ಅಲ್ಲಿಯೇ ಇರುವುದರಿಂದ.

ಎಂ.ಎ. ಕುಮಾರ್, ಬೆಂಗಳೂರು

ಸತ್ತಮೇಲಾದರೂ ದೇವರನ್ನು ಕಾಣಬಹುದೆ?

ಊಹೂಂ. ಕಣ್ಣನ್ನು ಇಲ್ಲೇ ಬಿಟ್ಟು ಹೋಗಿರುತ್ತೀರಲ್ಲ!

ಅನಸೂಯ ಟಿ., ಕೇದಿಗೆಮನೆ

ಸತ್ಯ, ಧರ್ಮ, ನ್ಯಾಯ; ಇವುಗಳಲ್ಲಿ ಯಾವುದಕ್ಕೆ ಹೆಚ್ಚು ತೂಕ?

'ಸತ್ಯವನ್ನು ಹಗುರಾಗಿಸಿ, ಧರ್ಮವನ್ನು ಮರೆಸುವ ನ್ಯಾಯವೇ' ಎಂದನಾ ಕೋರ್ಟುಪಕ್ಷಿ.

ವಿ. ಹಮೀದ್, ವಿಟ್ಲ

ಪತ್ನಿಗೆ ಹೌಸ್ ವೈಫ್ ಎಂದು ಹೆಸರಿಟ್ಟವನು ಯಾರು?

ಸ್ಟ್ರೀಟ್ ಹಸ್ಬೆಂಡು.

ಶಿವಮೊಗ್ಗ ರಮೇಶ್, ಮೈಸೂರು

ಜಾತಿ ಮತ್ತು ಕೊರೊನಾಗಳಲ್ಲಿ ಯಾವುದು ಹೆಚ್ಚು ಅಪಾಯಕಾರಿ?

ಕೊರೊನಾ 14 ದಿನಕ್ಕೆ ಗಾಯಬ್. ಜಾತಿ ಶತಮಾನಗಳಿಂದ ಕಾಡುತ್ತಲೇ ಇದೆ.

ಹರ್ಷ ಪ್ರಭಾಕರ್, ಬೆಂಗಳೂರು

ನೀವು ಅತಿ ಹೆಚ್ಚು ಸಮಯ ತೆಗೆದುಕೊಂಡು ಉತ್ತರಿಸಿದ ಅತ್ಯಂತ ಸರಳ ಪ್ರಶ್ನೆ ಯಾವುದು ರಾಮ್‌ಜೀ?

'ಏನು ಎಂದರೆ ಏನು?'

ರಾಜೇಶ್ವರಿ, ಪುತ್ತೂರು

ಗ್ರಹಣ, ಅಮಾವಾಸ್ಯೆಗಳೆಲ್ಲ ನ್ಯೂಸ್ ಚಾನಲ್‌ನವರು ವರ್ಣಿಸುವಷ್ಟು ಭೀಕರವಾಗಿರುತ್ತದೆಯೆ ರಾಮ್?

ಹ್ಞ! ಚಾನಲ್ ಅನಿಷ್ಟಕ್ಕೆ ಹೆದರಿಯೇ ಅಮಾವಾಸ್ಯೆ, ಗ್ರಹಣಗಳು ಗಂಟೆಗಳಲ್ಲಿ ಪರಾರಿಯಾಗುವುದಂತೆ.

ಬಿದರಹಳ್ಳಿ ಚೆನ್ನವೀರಪ್ಪ, ಹಿರೇಹಡಗಲಿ

ಗುರು ಇಲ್ಲದೆ ಕಲಿಯುವ ವಿದ್ಯೆ ಯಾವುದು?

ಸರ್ವಲಘು ಇರುವ 'ನಗಣ'ದ ಛಂದಸ್ಸಿನ ರಚನೆ.

## ಬಹುಮಾನಿತ ಪ್ರಶ್ನೆ

ಎನ್.ಎಸ್. ಚಂದ್ರಶೇಖರ್, ಬೆಂಗಳೂರು

ಬದುಕಿರುವಾಗಲೇ ನರಕ ಅನುಭವಿಸಿರುವ ಮನುಷ್ಯನಿಗೆ ಸತ್ತಮೇಲೆ ಸ್ವರ್ಗ ಸಿಗುವುದೇ ಗುರುವೆ?

ಈ ನರಕದ ಮುಂದೆ ನಿಜನರಕವೂ ಸ್ವರ್ಗವೇ; ಬೇವನ್ನೇ ಸೇವಿಸಿದವನಿಗೆ ನೀರೂ ಸಿಹಿಸಿಹಿ.

ವಿಜಯ್ ಹೆಮ್ಮಿಗೆ, ಮೈಸೂರು

ಬ್ಯಾಂಕ್, ಎಟಿಎಂ, ಶಾಲೆಗಳು ಮೊಬೈಲ್ ಇರುವಂತೆ ಮೊಬೈಲ್ ಎಲೆಕ್ಟ್ರಿಕ್ ಚಿತಾಗಾರವೂ ಮನೆಬಾಗಿಲಿಗೆ ಬರಬಹುದಲ್ಲವೆ?

ಊಹೂಂ. ಆ ಪ್ರಮಾಣದ ವಿದ್ಯುತ್ ಹೊಂದಿಸುವಷ್ಟರಲ್ಲಿ ಇಲಾಖೆಯ ಹೆಣ ಬೀಳುತ್ತದೆ.

ಕುಮಾರ ಚಲವಾದಿ, ಹಾಸನ

ಮನೆಯಲ್ಲಿ ಮನೆಯಾಕೆಯ ರೇಗಾಟದ ಭಯ. ಹೊರಗೆ ಕೊರೊನಾ ಭಯ. ಏನು ಮಾಡಲಿ?

ಹೊರಗೇ ಹೋಗಿ. ಬಾಯ್ಮುಚ್ಚಿಕೊಂಡು ಇರುವುದಕ್ಕಿಂತ ಮುಖ ಮುಚ್ಚಿಕೊಂಡು ಇರುವುದು ಮೇಲು.

ಮಲ್ಲಿಕಾರ್ಜುನ, ಸುರಧೇನುಪುರ

ಗುಲಾಬಿ ಪ್ರೀತಿಯ ಕುರುಹಾದರೆ ಲಾಬಿ...?



ಲೋಭಿಯ ಹರಹು.

ಕೆ.ಎಂ. ಉಮಾಶಂಕರ್, ಊರಿಲ್ಲ

ಮನುಷ್ಯತ್ವವೇ ಮಾಯವಾದಾಗ ಬದುಕೀಗೇನು ಕೆಲಸ?

ಹುಚ್ಚುನಾಯಿಗೂ ಬದುಕುವ ಹಕ್ಕಿದೆ ಎನ್ನುತ್ತದೆ ಪ್ರಾಣಿದಯಾಸಂಘ.

ಟಿ.ಎಂ. ಮಾನಪ್ಪ, ಶಿವಮೊಗ್ಗ

ಗಂಡನನ್ನು ಗೌರವದಿಂದ 'ರೀ...' ಎಂದು ಕರೆಯುತ್ತಾರೆ. ಏಕೆ?

ತಪ್ಪು ತಿಳಿದಿದ್ದೀರಿ. 'ರೀ' ಎನ್ನುವುದು ಚಲಾವಣೆಯಲ್ಲಿಲ್ಲದ ಕನಿಷ್ಠ ಮೌಲ್ಯದ ಪೋರ್ಚುಗೀಸ್ ನಾಣ್ಯ.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in